TD DEPT TECH EDUCATION

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/1/ಇಎಸ್ ಟಿ(3)/2024 | 1619

ಆಯುಕ್ತರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು
ದಿನಾಂಕ: 04-01-2025

## ಸುತ್ತೋಲೆ

ವಿಷಯ: 2024-25ನೇ ಶೈಕ್ಷಣಿಕ ಸಾಲಿಗೆ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹೆಚ್ಚುವರಿ ಬೋಧನಾ ಕಾರ್ಯಭಾರಕ್ಕೆ, ಅತಿಥಿ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ಆಯ್ಕೆ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 122 ಡಿಟಿಇ 2023, ದಿ:12.08.2024 ಹಾಗೂ ದಿ:27.09.2024.
2. ಈ ಕಛೇರಿ ಅಧಿಸೂಚನೆ ಸಂ: DTE-ADMIOEST(3)/1/2024, ದಿ:30.09.2024 ಹಾಗೂ ದಿ:05.10.2024.
3. ಈ ಕಛೇರಿ ಅಧಿಸೂಚನೆ ಸಂ: ಡಿಟಿಇ/1/ADMIOEST(3)/1/2024, ದಿ:30.09.2024 ಹಾಗೂ ದಿ:09.11.2024.
4. ಈ ಕಛೇರಿ ಸುತ್ತೋಲೆ ಸಂ: ಡಿಟಿಇ/1/ADMIOEST(3)/1/2024,ದಿ:16.11.2024.
5. ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಂದ ದೂರವಾಣಿ ಮುಖಾಂತರ ದಿ:18.12.2024 ರಂದು ಪಡೆದಿರುವ ಮಾಹಿತಿ.

******

ತಾಂತ್ರಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು / ಸರ್ಕಾರಿ ಪಾಲಿಟೆಕ್ನಿಕ್ / ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಸಂಸ್ಥೆಗಳಲ್ಲಿನ ಖಾಯಂ ಉಪನ್ಯಾಸಕರಿಗೆ ಬೋಧನಾ ಕಾರ್ಯಭಾರವನ್ನು ಹಂಚಿಕೆ ಮಾಡಿದ ನಂತರ ಉಳಿಕೆಯಾಗುವ ಬೋಧನಾ ಕಾರ್ಯಭಾರಕ್ಕನುಗುಣವಾಗಿ 2024-25ನೇ ಶೈಕ್ಷಣಿಕ ಸಾಲಿನ ಅವಧಿಗೆ ಇಲಾಖೆಯಲ್ಲಿ ಆನ್‌ಲೈನ್ ಕೌನ್ಸಲಿಂಗ್/Retain ಮೂಲಕ ಅತಿಥಿ ಉಪನ್ಯಾಸಕರನ್ನು ಕೆಲವು ಷರತ್ತುಗಳಿಗೊಳಪಟ್ಟು ಆಯ್ಕೆ ಮಾಡಿಕೊಳ್ಳಲು ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಲಾಗಿದೆ. ಉಲ್ಲೇಖ(2) ರ ಅಧಿಸೂಚನೆಯಲ್ಲಿ ಪ್ರಥಮ ಹಂತದ ಆನ್‌ಲೈನ್ ಕೌನ್ಸಿಲಿಂಗ್/Retain List ನಲ್ಲಿ ಆಯ್ಕೆ ಮಾಡಿಕೊಂಡ ಕಾಲೇಜುಗಳ ಹಾಗೂ ಅಭ್ಯರ್ಥಿಗಳ ವಿವರದ ವಿಷಯವಾರು ಪಟ್ಟಿಯನ್ನು ಹಾಗೂ ಉಲ್ಲೇಖ(3) ರ ಅಧಿಸೂಚನೆಯಲ್ಲಿ ಎರಡನೇ ಹಂತದ ಆನ್‌ಲೈನ್ ಕೌನ್ಸಿಲಿಂಗ್‌ನಲ್ಲಿ ಆಯ್ಕೆ ಮಾಡಿಕೊಂಡ ಕಾಲೇಜುಗಳ ಹಾಗೂ ಅಭ್ಯರ್ಥಿಗಳ ವಿವರದ ವಿಷಯವಾರು ಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುತ್ತದೆ. ಉಲ್ಲೇಖ(4) ರ ಸುತ್ತೋಲೆಯಲ್ಲಿ ಆನ್‌ಲೈನ್ ಕೌನ್ಸಿಲಿಂಗ್‌ನಲ್ಲಿ ಖಾಲಿ ಉಳಿದ ಅತಿಥಿ ಉಪನ್ಯಾಸಕರನ್ನು ಪ್ರಾಂಶುಪಾಲರ ಹಂತದಲ್ಲಿ ನೇಮಕ ಮಾಡಿಕೊಳ್ಳಲು ಸೂಚಿಸಲಾಗಿತ್ತು.

ಉಲ್ಲೇಖ(5) ರಂತೆ ಪ್ರಸ್ತುತ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕೆಳಕಂಡ ಕೋಷ್ಟಕದ ಕಾಲಂ (3) ರಲ್ಲಿ ನಮೂದಿಸಿರುವಂತೆ ಅತಿಥಿ ಉಪನ್ಯಾಸಕರುಗಳು ಕಾರ್ಯನಿರ್ವಹಿಸಲಾಗುತ್ತಿದೆ. ಉಲ್ಲೇಖ(1) ರಲ್ಲಿನ ಸರ್ಕಾರದ ಆದೇಶದಲ್ಲಿ 2024-25ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಒಟ್ಟು 294 ಅಥಿತಿ ಉಪನ್ಯಾಸಕರುಗಳನ್ನು ನೇಮಕ ಮಾಡಲು ಅನುಮತಿ ನೀಡಿದ್ದು, ಪ್ರಸ್ತುತ ಕೆಳಕಂಡ ಕೋಷ್ಟಕದ ಕಾಲಂ (4) ರಲ್ಲಿ ನಮೂದಿಸಿರುವ ಸಂಖ್ಯೆಯ ಮಿತಿಯೊಳಗೆ ಅಥಿತಿ ಉಪನ್ಯಾಸಕರ ಹುದ್ದೆಗಳು ಖಾಲಿ ಇದ್ದಲ್ಲಿ ಪ್ರಾಂಶುಪಾಲರ ಹಂತದಲ್ಲಿ ಸಮಿತಿಯನ್ನು ರಚಿಸಿಕೊಂಡು ನಿಯಮಾನುಸಾರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

...2

CamScanner

| ಕ್ರ.ಸ | ಸಂಸ್ಥೆಯ ಹೆಸರು | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ | ಒಟ್ಟು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಲು ಅನುಮತಿ ನೀಡಲಾಗುತ್ತಿರುವ ಸಂಖ್ಯೆ |
|---|---|---|---|
| (1) | (2) | (3) | (4) |
| 1 | Government Engineering College, Karwar | 20 | 20 |
| 2 | Government Engineering College, Haveri | 12 | 16 |
| 3 | Government Engineering College, Talkal | 28 | 29 |
| 4 | Government Engineering College, Mosalehosahalli | 26 | 28 |
| 5 | Government Engineering College, Ramanagara | 9 | 9 |
| 6 | Government Engineering College, Raichur | 20 | 21 |
| 7 | Government Engineering College, Krishnarajpet | 11 | 11 |
| 8 | Govt. Engineering College, Hassan | 12 | 12 |
| 9 | Government Engineering College, Chamarajanagar | 4 | 4 |
| 10 | Government Engineering College, Huvinahadagali | 19 | 20 |
| 11 | Government Engineering College, Kushalnagar | 20 | 23 |
| 12 | Government Engineering College, Challakere | 22 | 23 |
| 13 | Government Engineering College, Bidar | 18 | 18 |
| 14 | Government Engineering College, Naragund | 18 | 18 |
| 15 | Government S. K. S. J. T. Institute, Bangalore | 7 | 09 |
| 16 | Government Engineering College, Gangavathi | 30 | 33 |
| | ಒಟ್ಟು | 276 | 294 |

ಆಯುಕ್ತರು
ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಪ್ರತಿ:-

1. ತಾಂತ್ರಿಕ ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ (ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ)
2. ನೋಡಲ್ ಅಧಿಕಾರಿ, ಇ-ಆಡಳಿತ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಕಛೇರಿ ಪ್ರತಿ.

CamScanner